
ಕನ್ನಡದ ಕಥಾಜಗತ್ತನ್ನು ವಿಸ್ತರಿಸಿದ ಕಥೆಗಾರರ ಕಥೆ ಬರೆಯುವ ಕಸುಬಿನ ಕುರಿತಾದ ಮಾಲಿಕೆ – 'ನನ್ನ ಕಥಾಪ್ರಸಂಗ'. ಕಥಾಯಾನದ ಖುಷಿ, ಸಂಕಟ, ಆ ಪ್ರಕಾರದ ಕುರಿತಾದ ವ್ಯಾಮೋಹ, ಸವಾಲು, ಮಾಂತ್ರಿಕತೆ, ಅದರಿಂದ ಆಗುವ ಬಿಡುಗಡೆ – ಇವೆಲ್ಲ ಅನುಭವಗಳನ್ನು ಒಳಗೊಳ್ಳಲಿರುವ ಈ ಮಾಲಿಕೆಗೆ ಬಹುಕಾಲದಿಂದ ಕಥೆಗಳನ್ನು ಬರೆದುಕೊಂಡು ಬಂದ ಕಥೆಗಾರರು ಬರೆಯಲಿದ್ದಾರೆ. ಕಥೆಯ ತಂತ್ರ ಮತ್ತು ನಿರೂಪಣಾ ವಿಧಾನದ ಕುರಿತ ಕಥೆಗಾರರ ಸ್ವಅನುಭವ 'ಮಯೂರ'ದ ಪುಟಗಳಲ್ಲಿ ದಾಖಲಾಗಲಿದೆ



'ಸಾಹಿತ್ಯ'ದ ಕುರಿತಾಗಿ ಯಾವೊಂದು ತಿಳಿವಳಿಕೆಯೂ ಇಲ್ಲದ ಹದಿವಯಸ್ಸಿನ ಆರಂಭದ ವರ್ಷಗಳಲ್ಲಿ ಕವನ ಬರೆಯುವುದರೊಂದಿಗೆ ನನ್ನ ಬರವಣಿಗೆ ಆರಂಭವಾಯ್ತು. ನನ್ನ ಮೂರ್ನಾಲ್ಕು ಜನ ಆಪ್ತ ಗೆಳತಿಯರ ಪ್ರೇರೇಪಣೆ ಬರವಣಿಗೆಗೆ ಸ್ಫೂರ್ತಿ ತುಂಬಿತು ಎನ್ನುವಂತೆ ಹಲವಾರು ಕವನಗಳನ್ನು, ಬಾಲಿಶ ಕವನಗಳು ಅಂದರೆ ಹೆಚ್ಚು ಸೂಕ್ತವೇನೋ, ಬರೆದು, ಅವರಿಂದ ಶಾಭಾಷ್‌ಗಿರಿ ಪಡೆದವಳು ನನಗೇ ಅರಿವಿಲ್ಲದೆ ಕಥಾಮಾಧ್ಯಮದ ಕಡೆ ದಿಕ್ಕು ಬದಲಿಸಿದೆ. ಹೈಸ್ಕೂಲ್ ಮುಗಿಯುವಷ್ಟರಲ್ಲಿ ಒಂದು ಎಕ್ಸರ್‌ಸೈಜ್ ಪುಸ್ತಕದ ತುಂಬಾ ಕತೆಗಳನ್ನು ಬರೆದಿಟ್ಟುಕೊಂಡಿದ್ದು ನನ್ನ ನೆನಪಿನಲ್ಲಿ ಹಸಿರಾಗಿದೆ. ಓದಿದ್ದು ಕನ್ನಡ ಮಾಧ್ಯಮದಲ್ಲಿ. ಹಾಗಾಗಿ ಕನ್ನಡ ಸಲೀಸು, ಸುಲಭ ಆಗಿತ್ತು. ಹಿಂದೆ ಹಳ್ಳಿಮನೆಗಳಲ್ಲಿ ಸಣ್ಣಮಟ್ಟದ ಒಂದು ವಾಚನಾಲಯ ಇರುತ್ತಿತ್ತು. ಮಾಧ್ಯಮಗಳ ವಿಜೃಂಭಣೆ ಇಲ್ಲದ ಕಾಲದಲ್ಲಿ 'ಓದು' ಅನ್ನುವುದು ಮನರಂಜನೆಯ ಪ್ರಮುಖ ಸಾಧನವಾಗಿತ್ತು. ಹಾಗಾಗಿ ಹದಿವಯಸ್ಸಿನಿಂದಲೇ ಪುಸ್ತಕಗಳ ರುಚಿ ಹತ್ತಿತ್ತು. 'ಪ್ರಜಾವಾಣಿ' ಪತ್ರಿಕೆ ಅಂದರೆ ಅಕ್ಷರ ಕಲಿತಾಗಿನಿಂದ ಒಡನಾಡಿ. ಭಾನುವಾರದ ವಿಶೇಷ ಪುರವಣಿಯ ಕತೆ ಓದುವುದೆಂದರೆ ವಿಪರೀತದ ಸಂಭ್ರಮ. ಆಗೆಲ್ಲಾ ತಿಂಗಳ ಮೂರು ದಿನ ಅಂದರೆ ಮನೆಯೊಳಗಿನಿಂದ ಬಹಿಷ್ಕಾರ. ನಮ್ಮಂತವರಿಗೆಂದು ಮೀಸಲಾಗಿದ್ದ ಕೋಣೆಯಲ್ಲಿ ಕೂತು 'ಆ ದಿನ'ಗಳಿಗೆಂದೇ ಒಟ್ಟು ಹಾಕಿಟ್ಟುಕೊಂಡಿರುತ್ತಿದ್ದ ಕತೆ, ಕಾದಂಬರಿಗಳನ್ನು